**ಓ ಎಸ್ ನಂಃ 502/2023**
**ಡಿ ಡಬ್ಲ್ಯೂ ಃ 1**

**ದಿಃ 04.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ. ಎ ಕೆ ಹೆಚ್ ವಕೀಲರಿಂದಃ-**

ವಾದಿಯು ನನ್ನ ವಿರುದ್ದ ಜಮೀನನ್ನು ಬರೆದುಕೊಡುವಂತೆ ದಾವೆಯನ್ನು ಸಲ್ಲಿಸಿರುತ್ತಾರೆ. ಈ ದಾವೆಯಲ್ಲಿ ಸಲ್ಲಿಸಿರುವ ಪ್ರತಿವಾದ ಪತ್ರವನ್ನು ತಯಾರು ಮಾಡಲು ನಾನೇ ಮಾಹಿತಿ ನೀಡಿರುತ್ತೇನೆ. ವಾದ ಪತ್ರದಲ್ಲಿ ಹಾಗೂ ತಮ್ಮ ಪ್ರತಿವಾದ ಪತ್ರದಲ್ಲಿ ನಮೂದು ಮಾಡಿರುವ ಸಂಗತಿಗಳ ಬಗ್ಗೆ ತಮಗೆ ಸ್ಪಷ್ಟವಾಗಿ ಗೊತ್ತು ಎಂದರೆ ಸರಿ. ವಾದಿಯು ಈ ದಾವೆಯಲ್ಲಿ ಸಲ್ಲಿಸಿರುವ ದಾಖಲಾತಿಗಳ ಬಗ್ಗೆ ತಾವು ತಿಳಿದುಕೊಂಡಿದ್ದೀರಿ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ತಯಾರು ಮಾಡಲು ನಾನೆ ಮಾಹಿತಿ ನೀಡಿರುತ್ತೇನೆ. ನಾನು 9ನೇ ತರಗತಿ ವರೆಗೆ ವ್ಯಾಸಂಗ ಮಾಡಿರುತ್ತೇನೆ. ನನಗೆ ಮದುವೆ ಆಗಿದ್ದು ನನಗೆ ಮಕ್ಕಳು ಸಹ ಇದ್ದಾರೆ. ನನಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ವಾದಿ ವಿಕ್ರಂ ರವರು ತಮಗೆ ಯಾವ ರೀತಿ ಪರಿಚಯ ಎಂದರೆ ಸಾಕ್ಷಿ ಬಟ್ಟೆ ಅಂಗಡಿಯಲ್ಲಿ ಪರಿಚಯ ಇರುತ್ತಾರೆ. ವಾದಿಯು ನನಗೆ ಸುಮಾರು 6 ವರ್ಷಗಳಿಂದ ಪರಿಚಯ ಇರುತ್ತಾರೆ. ನನಗೆ ಇಬ್ಬರು ಮಕ್ಕಳು ಇರುತ್ತಾರೆ. ನನ್ನ ಮಗನ ಹೆಸರು ಪವನ್ ಹೆಚ್ ಜೆ. ನನ್ನ ಮಗಳ ಹೆಸರು ಹರ್ಷಿತ ಹೆಚ್ ಜೆ. ನನ್ನ ಮಗ 10 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ. ನನ್ನ ಮಗಳು 4 ನೇ ತರಗತಿ ವ್ಯಾಸಂಗ ಮಾಡುತ್ತಿದ್ದಾಳೆ. ನನ್ನ ಮಕ್ಕಳು ಮಾರುತಿ ಪಬ್ಲಿಕ್ ಸ್ಕೂಲ್ ನಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

ನಾನು ಆಟೋ ಚಾಲಕ ವೃತ್ತಿಯನ್ನು ಮಾಡುತ್ತಿದ್ದೇನೆ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನಿಪಿ 1 ರ ಪ್ರಕಾರ ಕ್ರಯದ ಕರಾರು ಪತ್ರವನ್ನು ವಾದಿಗೆ ಬರೆದುಕೊಟ್ಟಿದ್ದೀರಿ ಎಂದರೆ ಸಾಕ್ಷಿಯು ಸಾಲದ ಭದ್ರತೆಗಾಗಿ ಬರೆದುಕೊಟ್ಟಿದ್ದೀನಿ ಎಂದು ನುಡಿಯುತ್ತಾರೆ. ನಾನು ಯಾವುದೇ ದಾಖಲಾತಿಗೆ ಸಹಿಯನ್ನು ಮಾಡಬೇಕಾದರೆ ದಾಖಲಾತಿಯನ್ನು ಓದಿ ಸಹಿ ಮಾಡಿರುತ್ತೇನೆ. ನಿಪಿ 1ರ ಕ್ರಯದ ಕರಾರು ಪತ್ರದಲ್ಲಿ ಸದರಿ ದಾಖಲಾತಿಯನ್ನು ಸಾಲದ ಭದ್ರತೆಗಾಗಿ ಬರೆದುಕೊಡಲಾಗಿದೆ ಎಂದು ಒಕ್ಕಣೆ ಇಲ್ಲ ಎಂದರೆ ಸರಿಯಲ್ಲ. ನಿಪಿ 1ರ ಕ್ರಯದ ಕರಾರು ಪತ್ರದ ಪ್ರಕಾರ ತಾವು ರೂ. 2,00,000/- ಹಣವನ್ನು ವಾದಿಯಿಂದ ಪಡೆದುಕೊಂಡಿದ್ದೀರಿ ಎಂದರೆ ಸರಿಯಲ್ಲ. ನಿಪಿ 1ರ ಕ್ರಯದ ಕರಾರು ಪತ್ರದಲ್ಲಿ ನಮೂದು ಮಾಡಿರುವ ಚೆಕ್ಕನ್ನು ತಮ್ಮ ಬ್ಯಾಂಕ್ ಖಾತೆಗೆ ನಗದೀಕರಣಕ್ಕಾಗಿ

ಸಲ್ಲಿಸಿ ಹಣವನ್ನು ತಾವು ನಗದೀಕರಣ ಮಾಡಿದ್ದೀರಿ ಎಂದರೆ ಸರಿಯಲ್ಲ. ನಿಪಿ 1ರ ಕ್ರಯದ ಕರಾರು ಪತ್ರದಲ್ಲಿ ನಮೂದು ಮಾಡಿರುವ ರೂ. 5,00,000/- ಹಣವನ್ನು ತಾವು ಹೇಗೆ ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿಯು 2021 ನೇ ಸಾಲಿನಲ್ಲಿ ವಾದಿಯ ಅಣ್ಣನ ಕಡೆಯಿಂದ ರೂ. 3,00,000/- ಹಾಗೂ ವಾದಿಯ ಕಡೆಯಿಂದ ರೂ. 2,00,000/- ಹಣವನ್ನು ಪಡೆದುಕೊಂಡಿರುತ್ತೇನೆ. ನಾನು ವಾದಿಯ ಕಡೆಯಿಂದ ರೂ. 2,00,000/- ಹಣವನ್ನು ನಗದು ಪಡೆದುಕೊಂಡಿರುತ್ತೇನೆ. ಸದರಿ ಹಣವನ್ನು ನಾನು 2022 ಜನವರಿ ಮಾಹೆಯಲ್ಲಿ ಪಡೆದಿರುತ್ತೇನೆ. ತಾವು ರೂ. 3,00,000/- ಹಣವನ್ನು ವಾದಿಯ ಅಣ್ಣನ ಕಡೆಯಿಂದ ಯಾವ ರೂಪದಲ್ಲಿ ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿ ನಗದು ರೂಪದಲ್ಲಿ ಎಂದು ನುಡಿಯುತ್ತಾರೆ. ಯಾವ ಉದ್ದೇಶಕ್ಕಾಗಿ ವಾದಿಯ ಅಣ್ಣನ ಕಡೆಯಿಂದ ರೂ. 3,00,000/- ಹಣವನ್ನು ಪಡೆದಿದ್ದೀರಿ ಎಂದರೆ ಸಾಲದ ಉದ್ದೇಶಕ್ಕಾಗಿ ಪಡೆದಿದ್ದೇನೆ ಎಂದು ನುಡಿಯುತ್ತಾರೆ. ಸದರಿ ವಿಚಾರದ ಬಗ್ಗೆ ನಿಪಿ 1 ರ ಕ್ರಯದ ಕರಾರು ಪತ್ರದಲ್ಲಿ ಒಕ್ಕಣೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ವಾದಿಯ ಅಣ್ಣನ ಹೆಸರು ಮಹೇಶ್ ಕುಮಾರ್. ಸದರಿ ರವರನ್ನು ತಾವು ಕರೆಸಿ ಸಾಕ್ಷಿ ವಿಚಾರಣೆ ಮಾಡಿಸುತ್ತೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ 1 ರ ಪ್ರಕಾರ ಕ್ರಯದ ಕರಾರು ಪತ್ರ ಆದ ದಿನಾಂಕದಿಂದ 11 ತಿಂಗಳ ಒಳಗಾಗಿ ದಾವ ಸ್ವತ್ತನ್ನು ವಾದಿಯ ಹೆಸರಿಗೆ ಶುದ್ದ ಕ್ರಯ ಪತ್ರ ಬರೆದುಕೊಡಬೇಕೆಂದು ಒಕ್ಕಣೆ ಇದೆಯಾ ಎಂದರೆ ಸರಿಯಲ್ಲ. ತಾವು ನಿಪಿ 1 ರ ಕ್ರಯದ ಕರಾರಿನ ಪತ್ರದ ಪ್ರಕಾರ ತಾವು ವಾದಿಗೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಕ್ರಯ ಪತ್ರವನ್ನು ಬರೆದುಕೊಡದ ಕಾರಣ ವಾದಿಯು ದಿಃ 17.03.2023 ರಂದು ತಮ್ಮ ವಕೀಲರ ಮುಖಾಂತರ ತಮಗೆ ನೋಟಿಸ್‌ನ್ನು ಜಾರಿ ಮಾಡಿದ್ದಾರೆ ಎಂದರೆ ಸರಿ. ಸದರಿ ನೋಟಿಸ್ ನನಗೆ ಜಾರಿ ಆಗಿದೆ. ಸದರಿ ನೋಟಿಸ್‌ಗೆ ತಾವು ದಿಃ 29.04.2023 ರಂದು ತಮ್ಮ ವಕೀಲರ ಮುಖಾಂತರ ಜವಾಬನ್ನು ನೀಡಿದ್ದೀರಿ ಎಂದರೆ ಸರಿ. ತಾವು ಸದರಿ ಜವಾಬು ನೋಟಿಸ್‌ನಲ್ಲಿ ತಾವು ರೂ. 5,00,000/- ಹಣವನ್ನು ಸಾಲವಾಗಿ ಪಡೆದಿದ್ದೀರಿ ಎಂಬುದಾಗಿ ಒಪ್ಪಿಕೊಂಡಿದ್ದೀರಿ ಎಂದರೆ ಸಾಕ್ಷಿಯು ನಾನು ರೂ. 2,00,000/- ಸಾಲ ಪಡೆದಿದ್ದು ಕೈ ತಪ್ಪಿನಿಂದ ರೂ. 5,00,000/- ಎಂದು ನಮೂದಾಗಿದೆ ಎಂದು ನುಡಿಯುತ್ತಾರೆ. ತಮ್ಮ ಜವಾಬು ನೋಟಿಸ್‌ನಲ್ಲಿ ಶೇಕಡಾ 2 ರಷ್ಟು ಬಡ್ಡಿ ಕೊಡಬೇಕೆಂದು ನಮೂದಾಗಿದೆ ಎಂದರೆ ಸರಿ. ಸಾಕ್ಷಿ ಸ್ವತಃ ಮುಂದುವರೆದು ರೂ. 2,00,000/- ಹಣಕ್ಕೆ ಮಾತ್ರ ಬಡ್ಡಿ ಕೊಡಬೇಕು ಎಂದು ನು ಡಿಯುತ್ತಾರೆ. ತಮ್ಮ ಜವಾಬು ನೋಟಿಸ್‌ನಲ್ಲಿ 4 ತಿಂಗಳ ಬಡ್ಡಿ

ಕೊಟ್ಟಿರುತ್ತೇನೆ ಎಂದು ನಮಾದಾಗಿದೆ ಎಂದರೆ ಸರಿ. ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ತಮ್ಮ ಜವಾಬು ನೋಟಿಸ್ ನಲ್ಲಿ ವಾದಿಯ ಅಣ್ಣನ ಕಡೆಯಿಂದ ರೂ. 3,00,000/- ಹಣ ಹಾಗೂ ವಾದಿಯ ಕಡೆಯಿಂದ ರೂ. 2,00,000/- ಹಣವನ್ನು ಪಡೆದಿದ್ದೇನೆ ಎಂದು ನಮೂದು ಮಾಡಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ತಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ವಾದಿಗೆ 4 ತಿಂಗಳ ಬಡ್ಡಿ ನೀಡಿದ್ದೇನೆ ಎಂಬುದರ ಬಗ್ಗೆ ಒಕ್ಕಣೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ತಾವು ವಾದಿಯ ಅಣ್ಣನ ಕಡೆಯಿಂದ ರೂ. 3,00,000/- ಹಣವನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನಿಪಿ 1 ರ ಪ್ರಕಾರ ವಾದಿಯ ಕಡೆಯಿಂದ ರೂ. 5,00,000/- ಹಣವನ್ನು ಪಡೆದುಕೊಂಡಿದ್ದೀರಿ ಎಂದರೆ ಸರಿಯಲ್ಲ. ವಾದಿಯ ಕಡೆಯಿಂದ ಕೇವಲ ರೂ. 2,00,000/- ಹಣವನ್ನು ಪಡೆದುಕೊಂಡಿದ್ದೀನಿ ಎಂಬುದರ ಬಗ್ಗೆ ತಮ್ಮ ಜವಾಬು ನೋಟಿಸ್‌ನಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪ್ರತಿ ಗುಂಟೆಗೆ ರೂ.3,00,000/- ಬೆಲೆ ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ 1 ರ ಕ್ರಯದ ಕರಾರು ಪತ್ರದಲ್ಲಿರುವ ಒಕ್ಕಣೆ ಸರಿ ಇಲ್ಲ ಎಂದು ತೋರಿಸಲು ತಾವೇನಾದರೂ ಬೇರೆ ದಾವೆ ಹೂಡಿದ್ದೀರ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಾಕ್ಷಿಯು ಸ್ವತಃ ಮುಂದುವರೆದು ವಾದಿಯ ವಿರುದ್ದ ಸದರಿ ವಿಚಾರಕ್ಕೆ ಸಂಬಂಧಪಟ್ಟಂತೆ ಬೇರೆ ದಾವೆಯನ್ನು ಹೂಡಿರುವುದಿಲ್ಲ ಎಂದು ನುಡಿಯುುತ್ತಾರೆ. ವಾದಿಯು ತಮಗೆ ನೀಡಿರುವ ನೋಟಿಸ್ ತಮಗೆ ಜಾರಿ ಆದ ನಂತರ ವಾದಿಯು ನಿಪಿ 1 ರ ಕ್ರಯದ ಕರಾರು ಪತ್ರವನ್ನು ಮೋಸದಿಂದ ಬರೆಸಿಕೊಂಡಿದ್ದೀರ ಎಂದು ತಾವೇನಾದರೂ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲು ಮಾಡಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ವಾದಿಯು ಕ್ರಯದ ಕರಾರು ಪತ್ರದ ಪ್ರಕಾರ ಉಳಿಕೆ ಹಣ ರೂ. 2,00,000/- ತಮಗೆ ನೀಡಿ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಕ್ರಯ ಪತ್ರವನ್ನು ತಮ್ಮಿಂದ ಬರೆಸಿಕೊಳ್ಳಲು ಸಿದ್ದರಿದ್ದಾರೆ ಎಂದರೆ ಸರಿಯಲ್ಲ. ನಿಪಿ 9 ರ ಬ್ಯಾಂಕ್ ಸ್ಟೇಟ್ ಮೆಂಟ್ ಎಕ್ಸ್ ಟ್ರಾಕ್ಟ್ ನಲ್ಲಿ ರೂ. 2,00,000/- ಹಣ ಇದೆ ಎಂದರೆ ಸರಿಯಲ್ಲ. ತಾವು ನಿಪಿ 1 ರ ಕ್ರಯದ ಕರಾರು ಪತ್ರದಂತೆ ವಾದಿಯ ಹೆಸರಿಗೆ ಕ್ರಯ ಪತ್ರವನ್ನು ಬರೆದುಕೊಡಬಾರದು ಎಂಬ ಉದ್ದೇಶದಿಂದ ತಾವು ದಿಃ 29.04.2023 ರಂದು ವಾದಿಗೆ ತಾವು ಸುಳ್ಳು ಜವಾಬು ನೋಟಿಸ್ ನ್ನು ನೀಡಿದ್ದೀರಿ ಎಂದರೆ ಸರಿಯಲ್ಲ. ತಾವು ತಮ್ಮ ಪ್ರತಿವಾದ

**ಡಿ ಡಬ್ಲ್ಯೂ : 1**

ಪತ್ರದಲ್ಲಿ ಸುಳ್ಳು ಸಂಗತಿಗಳನ್ನು ನಮೂದಿಸಿದ್ದೀರಿ ಎಂದರೆ ಸರಿಯಲ್ಲ. ತಾವು ನ್ಯಾಯಾಲಯಕ್ಕೆ ಸುಳ್ಳು ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ನಿಪಿ 1ರ ಕ್ರಯದ ಕರಾರು ಪತ್ರ ಸಾಲದ ಭದ್ರತೆಗಾಗಿ ಬರೆದುಕೊಟ್ಟಿರುವ ಪತ್ರ ಅಲ್ಲ ಎಂದರೆ ಸರಿಯಲ್ಲ. ವಾದಿಯ ಅಣ್ಣನಿಗೆ ರೂ. 3,00,000/- ಹಣವನ್ನು ಹಿಂತಿರುಗಿಸಿರುವ ಬಗ್ಗೆ ತಮ್ಮ ಬಳಿ ದಾಖಲಾತಿ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಸ್ವತಃ ಮುಂದುವರೆದು ನಗದು ರೂಪದಲ್ಲಿ ಹಿಂತಿರುಗಿಸಿದ್ದೇನೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನನ್ನ ಜೊತೆ ಯಾರು ಇರುವುದಿಲ್ಲ. ತಾವು ಮೇಲೆ ಹೇಳಿದ ರೀತಿ ವಾದಿಯ ಅಣ್ಣನಿಂದ ಹಣವನ್ನು ಮರು ಪಾವತಿ ಮಾಡಿರುವುದಿಲ್ಲ ಆದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ 1ರ ಕ್ರಯದ ಕರಾರು ಪತ್ರದ ಅನುಗುಣವಾಗಿ ತಾವು 11 ಸ್ಕೆಚ್ ನ್ನು ಸಹ ಮಾಡಿಸಿಲ್ಲ ಎಂದರೆ ಸರಿ. ಸದರಿ ವಿಚಾರವಾಗಿ ವಾದಿ ತಮ್ಮ ವಿರುದ್ದ ಈ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**